## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 382

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 18.02.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯಲ್ಲಿ ಶಾಲೆಯ ಸಮಯಕ್ಕೆ ಬಸ್‌ಗಳಿಲ್ಲದೆ ಶಿಕ್ಷಣದಿಂದ ಅನೇಕ ಬಡ ವಿದ್ಯಾರ್ಥಿಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ 667 ಗ್ರಾಮಗಳ ಪೈಕಿ 664 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು, ಉಳಿದ 03 ಗ್ರಾಮಗಳಿಗೆ ಬಸ್ ಸಾಂಚಾರಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಿರುವುದಿಲ್ಲ.<br><br>ಬೀದರ್ ಜಿಲ್ಲೆಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗನುಸಾರವಾಗಿ ಶಾಲಾ-ಕಾಲೇಜುಗಳ ಸಮಯಕ್ಕೆ ಅನುಸೂಚಿ/ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುವಾರಿ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಿದ/ಒದಗಿಸಬೇಕಾದ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br><br>ಬೀದರ್ ಜಿಲ್ಲೆಯಲ್ಲಿ ಒಟ್ಟು 03 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಬೇಕಾಗಿದ್ದು, ಸದರಿ ಗ್ರಾಮಗಳ ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. ಸದರಿ 0 3 ಗ್ರಾಮಗಳ ರಸ್ತೆಗಳನ್ನು ದುರಸ್ಥಿಪಡಿಸುವಂತೆ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಬೀದರ್ ರವರಿಗೆ ದಿನಾಂಕ: 11.10.2021ರಂದು ಪತ್ರ ಬರೆಯಲಾಗಿರುತ್ತದೆ.<br><br>ಶಿಕ್ಷಣದಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಿರುವ ಪ್ರಕರಣಗಳು ಈ ಜಿಲ್ಲೆಯಲ್ಲಿ ವರದಿಯಾಗಿರುವುದಿಲ್ಲ. |
| ಆ. | ಬಂದಿದ್ದಲ್ಲಿ, ಎಷ್ಟು ಗ್ರಾಮಗಳಿಗೆ ಬಸ್ ಸೌಕರ್ಯ ಇರುವುದಿಲ್ಲ ಹಾಗೂ ಎಷ್ಟು ಮಕ್ಕಳು ಶಾಲೆಯಿಂದ ವಂಚಿತರಾಗುತ್ತಿದ್ದಾರೆ; ಗ್ರಾಮಗಳೆಷ್ಟು : ಮಕ್ಕಳೆಷ್ಟು ; (ಗ್ರಾಮಗಳು ಹಾಗೂ ಮಕ್ಕಳ ತಾಲ್ಲೂಕುವಾರು ಮಾಹಿತಿ ನೀಡುವುದು) | |
| ಇ. | ಶಿಕ್ಷಣದಿಂದ ವಂಚಿತರಾದ ಮಕ್ಕಳ ಅನುಕೂಲಕ್ಕಾಗಿ | ಸಾರ್ವಜನಿಕ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿ ಈಗಾಗಲೇ ಸಾರಿಗೆ ಸೌಲಭ್ಯ |

| | | |
|---|---|---|
| | ಸರ್ಕಾರ ಯಾವ ಕ್ರಮಕೈಗೊಂಡಿದೆ? | ಕಲ್ಪಿಸಲಾಗಿರುತ್ತದೆ. ಇನ್ನೂ ಹೆಚ್ಚಿನ ಬೇಡಿಕೆಗಳು ಬಂದಲ್ಲಿ, ಪರಿಶೀಲನೆ ಮಾಡಿ, ಬಸ್ ಸಂಚಾರ ಪ್ರಾರಂಭಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 30 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

# ಅನುಬಂಧ-1

## ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಬಸ್ ಸೇವೆ ಒದಗಿಸಿದ/ಒದಗಿಸಬೇಕಾದ ಗ್ರಾಮಗಳ ವಿವರದ ಪಟ್ಟಿ

| ಕ್ರ.ಸಂ | ತಾಲ್ಲೂಕು | ಒಟ್ಟು ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಿದ ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಬೇಕಾದ ಗ್ರಾಮಗಳ ಸಂಖ್ಯೆ |
|---|---|---|---|---|
| | ಬೀದರ | 151 | 151 | |
| | ಹುಮನಾಬಾದ | 50 | 50 | |
| | ಬಸವಕಲ್ಯಾಣ | 127 | 127 | |
| | ಭಾಲ್ಕಿ | 134 | 133 | 1 |
| | ಔರಾದ | 94 | 93 | 1 |
| | ಕಮಲನಗರ | 54 | 53 | 1 |
| | ಹುಲಸೂರ | 23 | 23 | |
| | ಚಿಟಗುಪ್ಪ | 34 | 34 | |
| | ಒಟ್ಟು | 667 | 664 | 3 |

# ಅನುಬಂಧ-2

## ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಬಸ್ ಸೇವೆ ಒದಗಿಸಬೇಕಾದ ಗ್ರಾಮಗಳ ವಿವರಣಾ ಪಟ್ಟಿ

| ಕ್ರ.ಸಂ | ತಾಲೂಕು | ಗ್ರಾಮದ ಹೆಸರು | ಸಾರಿಗೆ ಸೌಲಭ್ಯ ಒದಗಿಸದೇ ಇರಲು ಕಾರಣ | ಸದರಿ ಗ್ರಾಮಗಳಿಗೆ ಸಮೀಪದಲ್ಲಿ ಸಾರಿಗೆ ಸೌಲಭ್ಯ ಒದಗಿಸಲಾದ ವಿವರ |
|---|---|---|---|---|
| 1 | ಕಮಲನಗರ | ಮುತಖೇಡ | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 2.5 ಕಿ.ಮೀ ಅಂತರದಲ್ಲಿದ್ದು. ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿ ಮುಕ್ತಾಯಗೊಂಡ ನಂತರ ಸಾರಿಗೆ ಸೌಲಭ್ಯ ಒದಗಿಸಲಾಗುವುದು. | ಔರಾದ-ದಾಬಕಾ-ಉದಗೀರ ಮಾರ್ಗವಾಗಿ ದಿನಾಲು 05 ಸರತಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 2 | ಔರಾದ | ನಾಗೂರ (ಬಾಬಜಿ) | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 01 ಕಿ.ಮೀ ಅಂತರದಲ್ಲಿದ್ದು. ಗ್ರಾಮದ ಒಳಗೆ ಬಸ್ ತಿರುಗಿಸಲು ಸ್ಥಳ ಇರುವುದಿಲ್ಲ. | ಔರಾದ-ಸಂತಪೂರ-ಸಂಗಮ ಕ್ರಾಸ್ ಮಾರ್ಗವಾಗಿ ಭಾಲ್ಕಿಗೆ ಪ್ರತಿದಿನ 20 ಸರತಿಗಳ ಕಾರ್ಯಾಚರಣೆಯಲ್ಲಿದ್ದು. ಸದರಿ 20 ಸರತಿಗಳು ನಾಗೂರ (ಬಾಬಜಿ) ಮುಖ್ಯ ರಸ್ತೆ ನಿಲುಗಡೆ ಮಾಡುತ್ತಿವೆ. ಸದರಿ ಗ್ರಾಮಸ್ಥರು/ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 3 | ಭಾಲ್ಕಿ | ಎಕಲಾಸಪೂರ | ಸದರಿ ಗ್ರಾಮವು ಆನಂದವಾಡಿ ಗ್ರಾಮದಿಂದ 5.00 ಕಿ.ಮೀ ಅಂತರದಲ್ಲಿರುತ್ತದೆ. ಸದರಿ ಗ್ರಾಮಕ್ಕೆ ಇಲ್ಲಿಯವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ. | ಭಾಲ್ಕಿ ಪಟ್ಟಣದಲ್ಲಿ ರಸ್ತೆಯು ತೀರಾ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಾಚರಣೆಗೆ ಯೋಗ್ಯವಾಗಿರುವುದಿಲ್ಲ. ಅನಂದ ವಾಡಿವರೆಗೆ 03 ಸುತ್ತುವಳಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |